KACM030023522015



**ದಿಃ13-09-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನಬೋಧಿಸಲಾಯ್ತು.**

**ಮುಂದುವರೆದ ಪಾಟೀಸವಾಲು ಃಃ ಪ್ರತಿವಾದಿ ಪರ ಶ್ರೀ ಕೆ ಸಿ ಕೆ ವಕೀಲರಿಂದಃ**

ನನಗೆ ಆಂಗ್ಲ ಭಾಷೆಯನ್ನು ಓದಲು ಬರೆಯಲು ಸ್ಪಷ್ಟವಾಗಿ ಬರುವುದಿಲ್ಲ. ನನಗೆ ಕನ್ನಡ ಭಾಷೆ ಓದಲು ಬರುತ್ತದೆ ಆದರೆ ಬರೆಯಲು ಬರುವುದಿಲ್ಲ. ನಾನು ಐದನೇ ತರಗತಿ ಉತ್ತೀರ್ಣನಾಗಿರುತ್ತೇನೆ. ನಾನು ಆಜಾದ್ ಪಾರ್ಕ್ ಶಾಲೆಯಲ್ಲಿ ವ್ಯಾಸಂಗ ಮಾಡಿರುತ್ತೇನೆ.ಸದರಿ ಶಾಲಾ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ.

ದಾವಾ ಹೂಡುವ ಸಮಯದಲ್ಲಿ ನಾನೇ ಖುದ್ದಾಗಿ ನನ್ನ ವಕೀಲರಿಗೆ ಮಾಹಿತಿಯನ್ನು ನೀಡಿರುತ್ತೇನೆ. ದಾವಾ ಆಸ್ತಿಯ ಎ ಶೆಡ್ಯೂಲ್ ನಲ್ಲಿ ಸರ್ವೆ ನಂಬರ್ 249 ಎಂದು ನಮೂದು ಮಾಡಿಸಿರುತ್ತೇನೆ ಎಂದರೆ ಸರಿ. ವಾದಪತ್ರದಲ್ಲಿ ಎ ಶೆಡ್ಯೂಲ್ ಸ್ವತ್ತಿನ ವಿಸ್ತೀರ್ಣ 0.03.09.41 ಗುಂಟೆ ಎಂದು ನಮೂದು ಮಾಡಿಸಿರುತ್ತೇನೆ ಎಂದರೆ ಸರಿ.

ನಿಪಿ-1 ರಲ್ಲಿ ನಾನು ಪ್ರೇಮರವರಿಂದ ಖರೀದಿ ಮಾಡಿರುವ ಆಸ್ತಿಯ ಸರ್ವೆ ನಂಬರ್ 249/ಪಿ7 ಹಾಗೂ ವಿಸ್ತೀರ್ಣ 0-03.04.00 ಗುಂಟೆ ಆಗಿರುತ್ತದೆ ಎಂದರೆ ಸರಿ. ನನ್ನ ಹಿಂದಿನ ಮಾಲೀಕರಾದ ಪ್ರೇಮರವರು ಆಸ್ತಿಯನ್ನು ಸರ್ವೆ ಮಾಡಿಸಿರುವ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಸಾಕ್ಷಿಯು ಪುನಃ ಮುಂದುವರೆದು ಆಸ್ತಿಯ ಸರ್ವೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಸರ್ವೆಗೆ ಸಂಬಂಧಪಟ್ಟ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿಗೆ ಈಗ ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ತೋರಿಸಿದ್ದು, ಅದನ್ನು ಪರಿಶೀಲಿಸಿ ಸದರಿ ಸರ್ವೆಗೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-1 ರಿಂದ 9 ರಲ್ಲಿ , ನಿಪಿ-1 ಮಾತ್ರ ನನ್ನದು ಆಗಿರುತ್ತದೆ , ಉಳಿದ ದಾಖಲೆಗಳು ಯಾವುದು ಎಂದು ಹೇಳಲು ನನಗೆ ಆಗುವುದಿಲ್ಲ.

This is a True Copy of the Court Records Online. Authenticated @ districts.ecourtsindia.com/cnr/KACM030023522015/truecopy/order-2.pdf

www.ecourtsindia.com

ನಿಪಿ-1 ರ ಶೆಡ್ಯೂಲ್ ನಲ್ಲಿ ತಹಸೀಲ್ದಾರ್ ರವರು ದೃಢೀಕರಿಸಿದ ಸರ್ವೆ ಸ್ಕೆಚ್ಚಿನಂತೆ ಸರ್ವೆ ನಂಬರ್ 249/2 ಬ್ಲಾಕ್ ನಂಬರ್ 2 ಬಿ ರಲ್ಲಿ ಮೂರುಕಾಲು ಗುಂಟೆ ಎಂದು ದೃಢೀಕರಿಸಿರುತ್ತಾರೆ ಎಂದು ನಮೂದು ಇರುತ್ತದೆ ಎಂದರೆ ಸರಿ. ಸದರಿ ಸ್ಕೆಚ್ಚಿನ ಆಧಾರದ ಮೇರೆಗೆ ನಿಪಿ-1 ಅನ್ನು ಮಾಡಿರುತ್ತಾರೆ ಎಂದರೆ ಸರಿ. ಸದರಿ ಸ್ಕೆಚ್ಚನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದರೆ ಸತ್ಯ ಗೊತ್ತಾಗುತ್ತದೆ ಎಂದು ನಾನು ಸ್ಕೆಚ್ಚನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಸರ್ವೆ ನಂಬರ್ 249 ಮೂಲತಃ ಕೃಷಿ ಜಮೀನು ಎಂದರೆ ಸರಿ. ನಾನು ಮತ್ತು ನನ್ನ ಹಿಂದಿನ ಮಾಲೀಕರಾದ ಪ್ರೇಮರವರು ಸರ್ವೆ ನಂಬರ್ 249 ಕೃಷಿ ಜಮೀನಿನಿಂದ ನಿವೇಶನಕ್ಕೆ ಬದಲಾವಣೆ ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾನು ಸರ್ವೆ ನಂಬರ್ 249 ಅನ್ನು ಸೈಟ್ ಎಂದು ಖರೀದಿ ಮಾಡಿರುತ್ತೇನೆ. ದಾವಾ ಆಸ್ತಿಯ ಉದ್ದ-ಅಗಲ ಅಳತೆಯನ್ನು ಮಾಡಿಸಿರುತ್ತೇನೆ. ದಾವಾ ಆಸ್ತಿಗೆ ನಿವೇಶನ ಸಂಖ್ಯೆ ಇರುತ್ತದೆ. ಸದರಿ ನಿವೇಶನ ನಂಬರ್ ನನಗೆ ನೆನಪಿಲ್ಲ. ದಾವಾ ಆಸ್ತಿಗೆ ಸರ್ವೆ ನಂಬರ್ ಇರುತ್ತದೆಯೋ ಅಥವ ನಿವೇಶನ ಸಂಖ್ಯೆ ಇರುತ್ತೆದೆಯೋ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಾನು ದಾವೆ ಹೂಡುವ ಸಮಯದಲ್ಲಿ ದಾವಾ ಆಸ್ತಿಯ ನಿವೇಶನ ಸಂಖ್ಯೆ ಏನು ಎಂದು ನಮೂದು ಮಾಡಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಹೂಡುವ ಸಮಯದಲ್ಲಿ ನಾನು ವಕೀಲರಿಗೆ ದಾವಾ ಆಸ್ತಿಯ ನಿವೇಶನ ಸಂಖ್ಯೆ ಇರುತ್ತದೆ ಎಂದು ತಿಳಿಸಿರುವುದು ನನಗೆ ನೆನಪಿಲ್ಲ. ಈ ದಾವೆಯನ್ನು ನಾನು ಕೃಷಿ ಜಮೀನು ಎಂದು ಹೂಡಿರುತ್ತೀನೋ ಅಥವಾ ನಿವೇಶನ ಎಂದು ಹೂಡಿರುತ್ತೀನೋ ಎಂದು ನನಗೆ ಗೊತ್ತಿಲ್ಲ.

ಓ ಎಸ್ ನಂಬರ್ 344/2015 ರ ನಿಪಿ-4 ರಲ್ಲಿ ಹಿಸ್ಸಾ ನಂಬರ್ 30 ನನ್ನ ಹೆಸರಿಗೆ ದಾಖಲಾಗಿರುತ್ತದೆ ಎಂದರೆ ಸರಿ. ಸ್ಕೆಚ್ ನಲ್ಲಿ ಹಿಸ್ಸಾ ನಂಬರ್ 30 ರಿಂದ 32 ನಮೂದು ಆಗಿರುತ್ತದೆ ಎಂದರೆ ಸರಿ. ಸದರಿ ಸ್ಕೆಚ್ ನನ್ನ ಆಸ್ತಿಗೆ ಸಂಬಂಧಪಟ್ಟ ಸ್ಕೆಚ್ ಆಗಿರುತ್ತದೆ ಎಂದರೆ ಸರಿ. 11 ಇ ಸ್ಕೆಚ್ ಮಾಡುವ ಸಮಯದಲ್ಲಿ ಅಕ್ಕಪಕ್ಕದವರಿಗೆ ನೋಟೀಸನ್ನು ನೀಡಿರುತ್ತಾರೆ ಎಂದರೆ ಸರಿ. ಫಾರಂ ನಂಬರ್ 11 ಸಿ ರ ನೋಟೀಸ್‌ನಲ್ಲಿ ನನ್ನ ಹೆಸರು ಹಾಗೂ ಸಹಿ ಇರುತ್ತದೆ ಎಂದರೆ ಸರಿ. ಸದರಿ ನೋಟೀಸನ್ನು ನಿಡಿ-1 ಎಂದು, ಸಾಕ್ಷಿಯ ಸಹಿ ಮತ್ತು

This is a True Copy of the Court Records Online. Authenticated @ districts.ecourtsindia.com/cnr/KACM030023522015/truecopy/order-2.pdf

www.ecourtsindia.com

ಹೆಸರನ್ನು ನಿಡಿ-1(ಎ) ಎಂದು ಗುರುತಿಸಲಾಯಿತು. ದಾವಾ ಬಿ ಶೆಡ್ಯೂಲ್ ರಸ್ತೆ ಇರುವ ಬಾಬ್ತು ದಾಖಲೆಗಳು ನನ್ನ ಬಳಿ ಇರುತ್ತದೆ ಹಾಗೂ ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಶೆಡ್ಯೂಲ್ ಬಿ ಸ್ವತ್ತು ಇದೇ ಜಾಗದಲ್ಲಿ ಇದೆ ಎಂದು ನಿಖರವಾಗಿ ತೋರಿಸಲು ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಪ್ರತಿವಾದಿಯ ನಿವೇಶನದಲ್ಲಿ ಯಾವುದೇ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ರುಕ್ಷಾನ ಅಕ್ತರ್ ರವರು ಬರೆದುಕೊಟ್ಟಿರುವ ಪತ್ರದಲ್ಲಿ ಸದರಿ ರಸ್ತೆಯು 25 ಅಡಿ ಇರುತ್ತದೆ ಎಂದು ನಮೂದು ಇರುತ್ತದೆ. ಸದರಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ರಸ್ತೆ ಎಷ್ಟು ಉದ್ದ ಇದೆ ಎಂದು ನನಗೆ ಗೊತ್ತಿಲ್ಲ, ಪತ್ರ ನೋಡಿದರೆ ನಾನು ಹೇಳುತ್ತೇನೆ ಎಂದು ಉತ್ತರಿಸುತ್ತಾರೆ.

ಸರ್ವೆ ನಂಬರ್ 249 ರ ನಿವೇಶನಗಳ ಸ್ಕೆಚ್ ಏನಾದರು ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸರ್ವೆ ನಂಬರ್ 249 ರಲ್ಲಿ ಸುಮಾರು 10-15 ಜನರು ಇರುತ್ತಾರೆ. ನಿ.ಪಿ -2 ರಲ್ಲಿ ಸರ್ವೆ ನಂಬರ್ 249/30 ರಲ್ಲಿ 3.08 ಗುಂಟೆ ಜಮೀನು ನನ್ನ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ನಿಪಿ-5 ರಲ್ಲಿ ಸರ್ವೆ ನಂಬರ್ 249/2 ರಲ್ಲಿ ನನ್ನನ್ನು ಸೇರಿ ಒಟ್ಟು 14 ಜನರಿಗೆ ಆಗಿರುತ್ತದೆ ಎಂದರೆ ಸರಿ.

ದಾವಾ ಬಿ ಶೆಡ್ಯೂಲ್ ರಸ್ತೆಯ ಚೆಕ್ಕುಬಂದಿಯನ್ನು ನಿಪಿ-1 ರ ಮೇರೆಗೆ ವಾದ ಪತ್ರದಲ್ಲಿ ನೀಡಿರುತ್ತೇನೆ. ನಿಪಿ-1 ರಲ್ಲಿರುವ ಚೆಕ್ಕುಬಂದಿಯು ಸರಿಯಾಗಿ ನಮೂದಾಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿ ಪಶ್ಚಿಮಕ್ಕೆ ರಸ್ತೆ ಇರುತ್ತದೆ ಎಂದು ನಮೂದು ಮಾಡಿರುವುದು ತಪ್ಪು ಎಂದರೆ ಸರಿಯಲ್ಲ. ದಾವಾ ಆಸ್ತಿಯ ಉತ್ತರ ದಿಕ್ಕಿನಲ್ಲಿ ಇರುವ ರಸ್ತೆಗೆ ಯು ಜಿ ಡಿ ಆಗಿರುತ್ತದೆ.

ಪ್ರತಿವಾದಿಯ ಆಸ್ತಿಯ ಚೆಕ್ಕುಬಂದಿಯನ್ನು ನನಗೆ ಹೇಳಲು ಆಗುವುದಿಲ್ಲ. ಪ್ರತಿವಾದಿಯ ಆಸ್ತಿಯ ಪೂರ್ವ ದಿಕ್ಕಿಗೆ ರೇಖಾ ರವರ ಮನೆ ಇರುತ್ತದೆ. ರೇಖಾರವರ ಗಂಡನ ಹೆಸರು ಯೋಗೇಶ್ ಎಂದರೆ ಸರಿ. ರೇಖಾರವರ ಮನೆಯ ಉತ್ತರ ದಿಕ್ಕಿನಲ್ಲಿ ಇರುವ ರಸ್ತೆ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಯು ರೇಖಾರವರ ಮನೆಯ ದಕ್ಷಿಣ ದಿಕ್ಕಿಗೆ ಬರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ದಕ್ಷಿಣ ದಿಕ್ಕಿನಲ್ಲಿ ರುದ್ರಪ್ಪರವರ ಆಸ್ತಿ ಇರುತ್ತದೆ.

This is a True Copy of the Court Records Online. Authenticated @ districts.ecourtsindia.com/cnr/KACM030023522015/truecopy/order-2.pdf

ರುದ್ರಪ್ಪರವರ ಆಸ್ತಿಯ ನಂತರ ಪುನಃ ರಸ್ತೆ ಬರುತ್ತದೆ. ರುದ್ರಪ್ಪರವರ ಆಸ್ತಿಯಲ್ಲಿ ದಾವಾ ಬಿ ಶೆಡ್ಯೂಲ್ ರಸ್ತೆ ಇರುವುದಿಲ್ಲ. ರುದ್ರಪ್ಪರವರ ಆಸ್ತಿಯ ಪಶ್ಚಿಮ ದಿಕ್ಕಿಗೆ ಯಾರ ಆಸ್ತಿ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿ ಮತ್ತು ರುದ್ರಪ್ಪರವರ ಜಾಗ ಸೈಟ್ ಆಗಿರುತ್ತದೆ.

ನಿಪಿ-7 ರಲ್ಲಿ ಪ್ರತಿವಾದಿಯ ಹೆಸರಿನಲ್ಲಿ ಸರ್ವೆ ನಂಬರ್ 249/31 ರಲ್ಲಿ 4 ಗುಂಟೆ ಜಮೀನು ಇರುತ್ತದೆ ಎಂದು ನಮೂದು ಇದೆ ಎಂದರೆ ಸರಿ. ಪ್ರತಿವಾದಿಗೆ ಸಂಬಂಧಪಟ್ಟ ಕ್ರಯಪತ್ರವನ್ನು, ನಿಪಿ-6 ನಾನೇ ಹಾಜರುಪಡಿಸಿರುತ್ತೇನೆ ಎಂದರೆ ಸರಿ.

**ಮುಂದುವರೆದ ಪಾಟಿ ಸವಾಲು : ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸ ಇ ಎ ಒ

Sd/-

3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ, ಚಿಕ್ಕಮಗಳೂರು

This is a True Copy of the Court Records Online. Authenticated @ districts.ecourtsindia.com/cnr/KACM030023522015/truecopy/order-2.pdf

www.ecourtsindia.com